ನಾನು ಗುಲಗಂಜಿ ಕಾಯೇನು, ದೊಡ್ಡದೊಂದು ಕಲ್ಲಂಗಡಿ ಹಣ್ಣಿನಷ್ಟೇ ತೂಕ ಕೊಡಬಲ್ಲೆ ಎನ್ನುವ ವಿಜಯದ ದೃಷ್ಟಿ ಬೀರಿ, ದೊಡ್ಡ ದನಿಯಲ್ಲಿ 'ರೈಟ್ ಈಸ್ ರೈಟ್' ಎಂದು ಬಿಟ್ಟೆ!

ಮುಂದೇನಾಯ್ತು, ಯಾಕಾಯ್ತು ಎನ್ನುವುದು ನನಗೀಗಲೂ ಅರ್ಥವಾಗಿಲ್ಲ. ಮೊದಲು ಇಡೀ ಮಂದೆ ನಿಶ್ಶಬ್ದವಾಗಿಹೋಯ್ತು.

'ನೀವು ರೈಟ್ ವಿಂಗಾ ಪ್ರೇಮಾ? ನನಗೆ ಈ ವಿಚಾರ ಗೊತ್ತೇ ಇರಲಿಲ್ಲ. ಅದೆಷ್ಟು ದಡ್ಡಿ ತರ ಕೂತಿರತಿದ್ರಿ, ಈಗ ನೋಡಿದ್ರೆ ಕೊಲೆಗಡುಕರ ಜೊತೆ ಸೇರ್ಕೊಂಡಿದ್ದೀರಾ? ನಿಮ್ಮಂತವರಿಂದ ದೂರ ಇದ್ರೆ ಒಳ್ಳೇದು' ಅಂತ ಮೊದಲು ಎದ್ದುಹೋದವನು ನನ್ನ ಪಕ್ಕ ಕೂರುತ್ತಿದ್ದ ಸಹೋದ್ಯೋಗಿ ಅರವಿಂದ್. ನನ್ನೆದೆ ಧಸಕ್ಕೆಂದಿತು. ನನ್ನೊಡನೆ ದಿನಾ ಕೆಲಸ ಮಾಡುವ ಇವರೆಲ್ಲ ಯಾವಾಗ ಹೋಗಿ ಕೊಂದರು, ಯಾರನ್ನು ಕೊಂದರು, ಅದನ್ನು ಇತರರು ಹೇಗೆ ಪತ್ತೇದಾರಿ ಕೆಲಸ ಮಾಡಿ ಕಂಡುಹಿಡಿದರು ಎನ್ನುವ ನೂರು ಸಂಶಯಗಳು ಹುಟ್ಟಿಕೊಂಡವು.

ಏನಾಯ್ತು ಅಂತ ತಿಳಿಯುವ ಹೊತ್ತಿಗೆ ಸಡನ್ನಾಗಿ ಇನ್ನೊಂದು ಗುಂಪು ಜನ ನನ್ನೆಡೆಗೆ ಧಾವಿಸಿ ಬಂದರು. ಅಯ್ಯೋ ಇವರೇನು ನನಗೆ ಹೊಡೆದೇ ಬಿಡ್ತಾರೆ ಎನ್ನುವಷ್ಟರಲ್ಲಿ ಅವರಲ್ಲೊಬ್ಬ. 'ಹಾಗೇಳ್ರಿ ಇನ್ನೊಂದ್ಸಾರಿ, ಆಗ್ಲಾದ್ರೂ ಈ ಹೇಡಿಗಳಿಗೆ ಗೊತ್ತಾಗ್ಲಿ. ಉದಾರವಾದವಂತೆ, ಮಣ್ಣಂತೆ...' ಅಂತ ನನ್ನ ಪರ ನಿಂತರು. ನಾನು ಮೊದಲ ಬಾರಿಗೆ ವಿಜಯದ ನಗೆ ಬೀರಿದೆ. ಇನ್ನೊಂದು ಗುಂಪು ನಾನೊಂದು 'ದಡ್ಡ ಕೀಡೆ' (ಕೀಟ) ಎನ್ನುವಂತೆ ನೋಡಿ ಜಾಗ ಖಾಲಿ ಮಾಡಿದರು. ಊಟದ ಟೈಂ ಮುಗಿದಿದ್ದ ಕಾರಣ ನಾನೂ ದಡಬಡಾಯಿಸಿ ಹಿಂತಿರುಗಿದೆ. ಅಲ್ಲಿಂದ ಮುಂದೆ ನನ್ನ ಬದುಕೇ ಬದಲಾಗಿಹೋಯ್ತು.!

ಎಡದವರು ನನ್ನೊಂದಿಗೆ ಮಾತು ಬಿಟ್ಟರು. ಬಲದವರು ಆಗಾಗ ಬಂದು ಸ್ನೇಹದ ನೋಟ ಬೀರುತ್ತ 'ನೀನೂ ನಮ್ಮವಳೇ' ಎನ್ನುವ ಅಭಯ ನೀಡಿದರು. ಆದರೂ ಒಂದು ಪ್ರಮಾದವಾಯ್ತು. ನಾನು ಎಡದವರು ಯಾರು, ಬಲದವರು ಯಾರು ಅಂತ ಸರಿಯಾಗಿ ಗುರ್ತಿಸಿಕೊಂಡಿರಲಿಲ್ಲ. ಹಾಗಾಗಿ ಒಮ್ಮೊಮ್ಮೆ ಎಡದವರ ಬಳಿ ಬಲದವರು ಸರಿಯಿರಬೇಕೆಂದು ಹೇಳಿ ಬೈಸಿಕೊಳ್ಳುತ್ತಿದ್ದೆ. ಹಾಗೆಯೇ ಬಲದವರ ಬಳಿ ಮಾತಾಡುವಾಗ ಎಡಪಂಥೀಯ ವಿಚಾರಗಳನ್ನು ಮಂಡಿಸಿ ಖಂಡನೆಗೊಳಗಾದೆ. ಪಕ್ಕದ ಡೆಸ್ಕ್‌ನ ಅರವಿಂದನೊಂದಿಗಂತೂ ಮಾತಾಡಲು ಸಾಧ್ಯವಿರಲಿಲ್ಲ. ಕೊನೆಕೊನೆಗೆ ಬಾಯಿ ಬಿಡಲೇ ಭಯವಾಗತೊಡಗಿತು. ಎಷ್ಟರ ಮಟ್ಟಿಗೆಂದರೆ ಆಫೀಸಿನಲ್ಲಿ ನೇತುಹಾಕಿದ್ದ ನನ್ನ ನೆಚ್ಚಿನ ಗಾಂಧಿ ತಾತನ ಫೋಟೋಕ್ಕೆ ಎಂದಿನಂತೆ ನಮಸ್ಕರಿಸಲೂ ಭಯವಾಗತೊಡಗಿತು! ಇಷ್ಟೆಲ್ಲ ಎಡ–ಬಲಗಳು ಹೇಗೆ ಹುಟ್ಟಿಕೊಂಡವು ಅಥವಾ ಎಲ್ಲ ವಿಚಾರಗಳಿಗೂ ಹೇಗೆ ತಗುಲಿಕೊಂಡವು ಅಂತ ಚಿಂತೆ ಶುರುವಾಯ್ತು. 'ಬಿಲಾಂಗಿಂಗ್' ಭಾವಕ್ಕಾಗಿ ರೈಟ್ ಅನ್ನು ಸರಿಯೆಂದು ಹೇಳಿ ಸಮಸ್ಯೆ ಹುಟ್ಟಿದ್ದರಿಂದ ಕಂಪ್ಯೂಟರಿನ ಬಗ್ಗೆಯೂ ದ್ವೇಷ ಹುಟ್ಟಿಕೊಂಡಿತ್ತು. ಇನ್ನು ಎಡ–ಬಲಗಳ ವ್ಯತ್ಯಾಸವನ್ನು ಹೇಳಿ ಅಂತ ಯಾರನ್ನಾದರೂ ಕೇಳಲು ಹೋದರೆ 'ನಿನಗೆ ಅಷ್ಟೂ ಗೊತ್ತಿಲ್ಲವಾ?' ಅಂತಲೋ, 'ಗೊತ್ತಿಲ್ಲದೆ ಮಾತಾಡಿದೆಯಾ' ಅಂತಲೋ ಎಲ್ಲಿ ನಗೆಪಾಟಲಿಗೊಳಗಾಗುತ್ತೇನೋ ಅನ್ನುವ ಕಾರಣಕ್ಕೆ ಬಾಯಿ ಬಿಡಲಾಗಲಿಲ್ಲ.

'ಇವಳಿಗೇನು ಗೊತ್ತಾಗುತ್ತದೆ?' ಎನ್ನುವ ಗತ್ತಿನಲ್ಲಿ ಓಡಾಡುತ್ತ, ವಾಷಿಂಗ್ ಮಿಷನ್ ಟ್ಯಾಬ್ಲೆಟ್ ತಗೊಂಬಾ ಅಂತ ಕಳಿಸಿದರೆ ಡಿಷ್ ವಾಷರ್ ಗುಳಿಗೆಗಳನ್ನು ತರುತ್ತಿದ್ದ ಗಂಡನನ್ನು ಕೇಳೋಣ ಅಂತ ನಿರ್ಧರಿಸಿದೆ. ಯಾಕೆಂದರೆ ದಿನವೊಂದಕ್ಕೆ ಹತ್ತು ಬಾರಿ ನನ್ನಿಂದ ಉಗಿಸಿಕೊಂಡು ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂತಲೇ ವಾದ ಬೆಳೆಸುತ್ತಿದ್ದ ಗಂಡನ ಬಳಿ ಮಾನ ಹೋಗುವ ಅವಕಾಶವೇ ಇರಲಿಲ್ಲ. ಇಬ್ಬರೂ ಅನೇಕ ಬಾರಿ ಇನ್ನೊಬ್ಬರ ಮಾನಹರಣ ಮಾಡಿದ ಮೇಲಿನ ನಿರಾಳತೆ ನಮ್ಮಿಬ್ಬರ ನಡುವೆಯಿತ್ತು. ಆದರೂ ಪ್ರಶ್ನೆಯನ್ನು ಹೇಗೆ ಕೇಳುವುದೆಂದು ತಯಾರಾಗಬೇಕಿತ್ತು.

ಜೊತೆಗೆ ನನ್ನ ಪತಿರಾಯ ಎಡಪಂಥೀಯನೋ ಬಲ ಪಂಥೀಯನೋ ಎನ್ನುವ ಪ್ರಶ್ನೆ ಹುಟ್ಟಿತು. ಹೇಗೆ ತಿಳಿಯುವುದೆಂದು ಗೊತ್ತಾಗಲಿಲ್ಲ. ಅಕಸ್ಮಾತ್ ನಾವಿಬ್ಬರೂ ಬೇರೆ ಬೇರೆ ಪಂಥದವರೆಂದು ಗೊತ್ತಾದರೆ ಆಮೇಲೆ ಒಂದೇ ಮನೆಯಲ್ಲಿ ಹೇಗೆ ಬದುಕುವುದು ಎನ್ನುವ ಸಂಶಯ ತಲೆದೋರಿತು. ಇನ್ನು ಮಕ್ಕಳನ್ನೂ ಜೊತೆಗೆ ಸೇರಿಸಿಕೊಂಡು ಯಾರು ಮೆಜಾರಿಟಿಯೋ ಅವರದೇ ಗೆಲುವು ಎನ್ನಲು ನಮಗಿದ್ದ ಮಕ್ಕಳು ಇಬ್ಬರೇ. ಮಗಳು ಎಡ, ಮಗ ಬಲ ಅಂಥ ಏನಾದರೂ ಆದರೆ ವಿಚಾರ 'ಟೈ' ಆಗಿಬಿಡುತ್ತದೆ. ಆಗೇನು ಮಾಡುವುದು? ಆಫೀಸಿನಂತೆ ಮನೆಯಲ್ಲಿಯೂ ಅರ್ಧ ಜನ ಮಾತು ಬಿಟ್ಟರೆ ಅದು ನರಕವೇ ಸರಿ ಎನ್ನುವ ಅಳುಕು ಕಾಡಿತು. ಅವತ್ತು ರಾತ್ರಿ ಕೆಲಸವನ್ನೆಲ್ಲ ಮುಗಿಸಿ ಮಲಗುವ ಸಮಯದಲ್ಲಿ ಈ ವಿಚಾರವನ್ನು 'ಟ್ಯಾಕ್ಟಿಕಲ್' ಆಗಿ ಹೇಗೆ ಕೇಳುವುದು ಎಂದು ಯೋಚಿಸಿ ನಿರ್ಧರಿಸಿದೆ.


ಕೋಣೆಗೆ ಮಲಗಲು ಹೊರಟ ಗಂಡನ ಕೈ ಹಿಡಿದು, 'ರೀ, ನಿಮಗೆ ಮಂಚದ ಯಾವ ಬದಿ ಇಷ್ಟ? ಎಡವೋ, ಬಲವೋ?' ಅಂತ ಕೇಳಿದೆ. ಅರೆಕ್ಷಣ ಗರಬಡಿದ ಪತಿ ನನ್ನೆಡೆಗೆ ತಿರುಗಿ 'ದೇವೀ, ದೇವರ ಪಟಗಳಲ್ಲಿ ನೋಡಿಲ್ಲವೇ, ಹೆಂಡತಿ ಯಾವಾಗಲೂ ದೇವನ ಎಡಕ್ಕೇ ಇರಬೇಕು' ಅಂತ ವ್ಯಂಗ್ಯವಾಗಿ ನಕ್ಕ. 'ಹೌದಲ್ಲವೇ, ಎಡವೇ ನನಗೆ ಶ್ರೇಷ್ಠ' ಎಂದುಕೊಳ್ಳುತ್ತಿರುವಾಗಲೇ, 'ಬಿಟ್ಟರೆ, ಎರಡೂ ಕಡೆಗೆ ನೀನೇ ಮಲಗಿಬಿಡುತ್ತೀಯ. ಇತ್ತೀಚೆಗೆ ನನಗೆ ಜಾಗವೇ ಇಲ್ಲದಷ್ಟು ಊದಿಬಿಟ್ಟಿದ್ದೀಯ. ಯಾಕೋ ಇವತ್ತು ವಿಚಿತ್ರವಾಗಿ ಪ್ರಶ್ನೆ ಕೇಳ್ತಿದ್ದೀಯಲ್ಲ ಏನ್ಸಮಾಚಾರ?' ಅಂತ ಹುಬ್ಬೆಗರಿಸಿದ.

'ಏನಿಲ್ಲ... ನಿಮಗೆ...' ಅಂತ ತಡಬಡಯಿಸುತ್ತಿರುವಾಗಲೇ – 'ಇವತ್ತಾದರು ನಾನು ಮಧ್ಯದಲ್ಲಿ ಆರಾಮವಾಗಿ ಮಲಗುತ್ತೇನೆ, ನೀನು ಪಕ್ಕದ ಕೋಣೇಲಿ ಮಲಕ್ಕೋ' ಅಂತ ಮಂಚದ ಮಧ್ಯಕ್ಕೆ ಗಪ್ಪನೆ ಹಾರಿ ಗೊರಕೆ ಹೊಡೆಯತೊಡಗಿದ. ಗಂಡನ ಗುಂಡಿಗೆ ಬಗೆಯುವಷ್ಟು ಕೋಪ ಬಂತು. ಆದರೂ ತಡಕೊಂಡೆ. ಪಕ್ಕದ ಕೋಣೆಗೆ ಹೋಗಿ ಮಲಗಿ ಎಷ್ಟೊತ್ತಾದರೂ ನಿದ್ರೆಯೇ ಬರಲಿಲ್ಲ. ಎಡ–ಬಲ ಎನ್ನುವ ಶಬ್ದಗಳನ್ನು ಎತ್ತಿದ್ದಕ್ಕೇ ನನಗೆ ವರ್ಗಾವಣೆಯಾಗಿತ್ತು. ದರಿದ್ರ, ಆ ಶಬ್ದಗಳನ್ನೇ ಬಳಸುವುದಿಲ್ಲ ಅಂತ ನಿರ್ಧರಿಸಿ ಮಲಗಿದೆ.

ಮರುದಿನ ಆಫೀಸಿನಲ್ಲಿ ನಾನು ಎಡಪಂಥೀಯರ ಬಳಿ ಹೋಗಿ 'ಬಲ'ವನ್ನು ತ್ಯಜಿಸಿದೆ ಅಂತ ಹೇಳಿಬಂದೆ, ಬಲದವರ ಬಳಿ ಈಗ ನಿಮ್ಮ ಜೊತೆಯಿಲ್ಲ ಅಂತ ಹೇಳಿದೆ. ಯಾಕೆಂದು ಕೇಳಲು ಅವಕಾಶವನ್ನೇ ಕೊಡದೆ ತಟ್ಟನೆ ನನ್ನ ಟೇಬಲ್ಲಿಗೆ ಬಂದು ಬೆವರೊರೆಸಿಕೊಂಡು ಕೂತೆ. ಅವತ್ತು ಮಧ್ಯಾಹ್ನ ಎಡದವರು ಮೆಲ್ಲಗೆ ಬಳಿಸಾರಿ ಕಮ್ಯುನಿಸ್ಟ್ ಸಿದ್ಧಾಂತಗಳ ಬಗ್ಗೆ ಮತ್ತು ಸೋಷಿಯಲ್ ಪಾಲಿಸಿಗಳ ಬಗ್ಗೆ ವಿವರಿಸುತ್ತ ಬಲವನ್ನು ವಿರೋಧಿಸುವವರೆಲ್ಲ ಪಕ್ಕಾ ಎಡವೇನಲ್ಲ ಅಂತ ವಿವರಿಸಿ ಹೇಳಲು ಹವಣಿಸಿದರು. ಸಾಯಂಕಾಲದವರೆಗೆ ಗುಸು ಗುಸು ನಡೆಸಿದ ಬಲದವರು ಮನಸ್ಸನ್ನು ಬದಲಾಯಿಸುವಂತೆ ಪುಸಲಾಯಿಸಿದರು. 'ಎರಡೂ ಅಲ್ಲ ಅಂದರೆ ಹೇಗೆ ಮೇಡಂ' ಅಂತ ಧಮಕಿ ಹಾಕಿದರು. ಕ್ಯಾರೇ ಅನ್ನದೆ ಮನೆಗೆ ಬಂದೆ. ಅವತ್ತು ರಾತ್ರಿ, 'ನಾವಿಬ್ಬರೂ ಎಂದಿನಂತೆ ಒಟ್ಟಿಗೆ ಮಧ್ಯದಲ್ಲಿ ಮಲಗೋಣ' ಎಂದು ಗಂಡನನ್ನು ರಮಿಸಿ, ಬೆಚ್ಚಗೆ ಪಕ್ಕಕ್ಕೆ ತೂರಿಕೊಂಡೆ.

'ಬಲ' ಮತ್ತು 'ಎಡ' ಎನ್ನುವ ಪದಗಳ ಬಗ್ಗೆ ಜಿಗುಪ್ಸೆ ಮೂಡಿಬಿಟ್ಟಿತ್ತು. ಅಷ್ಟರಲ್ಲಿ ಎಡದಿಂದ ಮೊದಲ ಅಕ್ಕನೂ, ಬಲದಿಂದ ಎರಡನೇ ಅಕ್ಕನೂ ಸುತ್ತುವರೆದು ನಮ್ಮನ್ನು ಹುಡುಕಿ ಬಂದರು. 'ಅಯ್ಯೋ ತಾಯಿ... ಕೊನೆಗೂ ಸಿಕ್ಕೆಯಲ್ಲ. ಅದೆಲ್ಲಿ ಕಳೆದುಹೋದೆಯೋ ಅಂತ ಭಯವಾಗಿತ್ತು' ಎಂದರು

ಹಲ್ಲು ಕಿರಿಯುತ್ತ ಸಮಾಧಾನದಿಂದ ಅವರ ಮಧ್ಯಕ್ಕೆ ಸೆಂಟ್ರಿಸ್ಟ್‌ನಂತೆ ನುಸುಳಿ, ಭುಜಗಳ ನಡುವಿನ ತಲೆಯನ್ನು ಸಮನಾಗಿಟ್ಟುಕೊಂಡು ನಡೆಯತೊಡಗಿದೆ. ■



## ಸುಖ ನಿದ್ದೆ

ಸಂಜೆ ಹೊತ್ತು ಬಾನ ತುಂಬ
ಬೆಳ್ಳಿ ಬೆಳಕ ಕಂಡು
ಮನಕೆ ಬಾರಿ ಪುಳಕ;
ಇರುಳಿಡೀ ಸುಖದ ಕನಸು
ತನು ಮನಕೆ ಜಳಕ

■ ವಿ. ಸುಬ್ರಹ್ಮಣ್ಯ ಭಟ್